ನನಗನಿಸ್ತಿದೆ, ತಾತನೂ ಮೊದಲೇ ತೀರಿಕೊಂಡಿದ್ರೇನೋ. ಯಾಕಂದ್ರೆ ಪ್ರತಿರೋಧವೆ ಕಾಣಲಿಲ್ಲ. ಈಗಿದೆಲ್ಲ ಸರಿಯಲ್ಲ. ನಿಂಗಿನ್ನೂ ಸಣ್ಣ ವಯಸ್ಸು... ನೀನು ಹೋಗು.'

ಒಂದು ನಿಮಿಷ ಏನೋ ಯೋಚಿಸುತ್ತ ಅವನನ್ನೆ ನೋಡುತ್ತ ನಿಂತಳು. ನಂತರ ಹಾಲಿನ ಲೈಟು ಆರಿಸುತ್ತ 'ಹಾಲಲ್ಲಿ ಲೈಟಿದ್ರೆ ನೀವಿನ್ನೂ ಮಲಗಿಲ್ಲ ಅಂತ ಯಾರಾದ್ರೂ ಬರಬಹುದು... ನಡೀರಿ' ಅಂತ ಮಲಗೋ ಕೋಣೆಗೆ ಅವನನ್ನ ಮೃದುವಾಗಿ ತಳ್ಳಿಕೊಂಡು ಬಂದವಳೆ ಎದೆಗೊರಗಿ ಕೊರಳಸುತ್ತ ಕೈಗಳ ಮಾಲೆಯಾದಳು. ಕಣ್ಣುಗಳಲ್ಲಿ ಆಹ್ವಾನವಿತ್ತು, ತುಟಿಯಲ್ಲಿ ತೇವವಿತ್ತು. ಯಾವ ಆತಂಕವಿಲ್ಲ. ಮತ್ತೆ ಕರಗಿದ. 'ಈ ಸಲ ನೀವೇ ಹುಕ್ ತೆಗೀಬೇಕು...' ಛೇಡಿಸಿದಳು. ಎಚ್ಚರಾದಾಗ ಗಡಿಯಾರ ನೋಡಿದರೆ ಐದುಗಂಟೆ. ಪಕ್ಕದಲ್ಲಿ ಕಿತ್ತಳೆತೊಳೆಯಂತೆ ಮಂಜರಿ. ಗಾಬರಿಯಲ್ಲಿ ತಟ್ಟಿ ಎಬ್ಬಿಸಿದ. ಅವಳು ಗಡಿಬಿಡಿಯಲ್ಲಿ ಬಟ್ಟೆ ಹಾಕಿಕೊಂಡು ಮೆತ್ತಗೆ ಬಾಗಿಲು ತೆರೆದು ಮರೆಯಾದಳು. 'ಯಾರೂ ಸದ್ಯ ಗಮನಿಸದಿದ್ರೆ ಸಾಕು!' ಬಾಲ್ಕನಿಯಲ್ಲಿ ತಲೆ ಹಾಕಿ ಸುತ್ತಮುತ್ತ ಆತಂಕದಿಂದ ವೀಕ್ಷಿಸಿದ. 'ಭಂಡಧೈರ್ಯ ನೋಡು!' ಬೈದುಕೊಂಡದ್ದರಲ್ಲಿ ಮೆಚ್ಚುಗೆಯೂ ಸೇರಿತ್ತು. ಬೆಳಗಾಗುತ್ತಿದ್ದಂತೆ ಇದರಲ್ಲಿ ಅರ್ಥವಾಗದ್ದೇ ಜಾಸ್ತಿಯೆನಿಸತೊಡಗಿ ಮತ್ತೆ ಆತಂಕಕ್ಕೆ ಸುರುವಾಯಿತು. ಯಾವುದೇ ವ್ಯೂಹವಿದ್ದೀತೇ... ಬಲಾತ್ಕಾರದ ಪ್ರಕರಣದಲ್ಲಿ ಸಿಕ್ಕಿಸಿಹಾಕಿ... ಅಥವಾ ಬ್ಲಾಕ್‌ಮೇಲ್ ಮಾಡಿ ಹಣ ಕಿತ್ತು... ಇಲ್ಲ, ಸೇಡು ತೀರಿಸಿಕೊಳ್ಳಲು ಸಾಕ್ಷ್ಯ ಸೃಷ್ಟಿಸಲು ಬಂದಿದ್ದರೆ? ಈಗ ಅವಳ ಅಪರಾಧ ಸಿದ್ಧಮಾಡುವ ಯಾವ ಸಾಕ್ಷ್ಯವೂ ತನ್ನಲ್ಲಿಲ್ಲ. ಬಾಯಿಮಾತನ್ನು ಯಾರೂ ನಂಬುವುದೂ ಇಲ್ಲ. ಆದರೆ ಅವಳ ಹತ್ತಿರವಿರೋ ಪುರಾವೆ ಬೇಕಷ್ಟಾಯಿತು. ತಳಮಳ ಸುರುವಾಯಿತು. ಶಾಲೆಯಲ್ಲಿ ಪಾಠ ಮಾಡುವಾಗ ಪೊಲೀಸರು ಹುಡುಕಿಕೊಂಡು ಯಾವಕ್ಷಣದಲ್ಲೂ ಬರಬಹುದು ಅಂತ ಪ್ರತಿನಿತ್ಯ ಅನಿಸುತ್ತಿತ್ತು. ಮುಖ್ಯೋಪಾಧ್ಯಾಯರು ಕರೆದರೆ ಇದಕ್ಕೇ ಇರಬಹುದು ಅನ್ನುವ ಭಯದಿಂದಲೆ ಹೋಗುತ್ತಿದ್ದ. ಎಂತಾ ಎಡವಟ್ಟು ಮಾಡಿಕೊಂಡುಬಿಟ್ಟೆ? ಸಾಹಸ ಮಾಡಿ ಇಂಥ ಪ್ರಾಣಕ್ಕೆ ಬರುವ ಸುಖ ಪಡೆಯೋ ಅನಿವಾರ್ಯತೆಯಿತ್ತೇ? ವರ್ಷಗಳ ಹಿಂದೆಯೇ ಮದುವೆಯಾಗಬಹುದಿತ್ತಲ್ಲ! ಒಂದು ಕರಕರೆ ಸ್ಥಾಯಿಯಾಗಿ ಹೋಯಿತು. ಒಂದು ಸೂಚನೆ ಸಿಕ್ಕರೆ ಹಿಂದಿನ ಗೇಟಿಂದ ಉತ್ತರ ಭಾರತದ ಕಡೆ ಪಲಾಯನ ಮಾಡಿಬಿಡುವುದು ಅತ್ಲಾಗೆ ಅನ್ನೋ ಆಲೋಚನೆಯೂ ಬಂದುಹೋಯಿತು. ವಾರ ಗತಿಸಿ ಒಂದು ತಿಂಗಳೇ ಕಳೆದಾಗ ಭಯ ಕಡಿಮೆಯಾಗತೊಡಗಿತು. ಇದೆಲ್ಲ ತನ್ನ ಭ್ರಮೆ. ಅಂತದೆಲ್ಲ ಮಾಡುವುದಾದರೆ ಇಷ್ಟೆಲ್ಲ ಕಾಯುತ್ತಾರೆಯೇ ಅನಿಸಿ ಸಮಾಧಾನವಾಗತೊಡಗಿತು. ಬಾಲ್ಕನಿಯಿಂದ ಬೆಳಗಿನ ವೀಕ್ಷಣೆ ನಿಲ್ಲಿಸಿಬಿಟ್ಟಿದ್ದ. ಕಾಫಿಯನ್ನು ಹಾಲಿನಲ್ಲೇ ಕುಳಿತು ಕುಡಿಯುತ್ತಿದ್ದ. ಬಾಗಿಲ ಮರೆಯಿಂದ ಕದ್ದು ನೋಡಿದರೆ ಮಂಜರಿ ತನ್ನಪಾಡಿಗೆ ತಾನು ತಯಾರಾಗಿ ಕೆಲಸಕ್ಕೆ ಹೊರಡುವಾಗ ಒಮ್ಮೆ ಇವನ ಬಾಲ್ಕನಿಯತ್ತ ದೃಷ್ಟಿ ಹರಿಸುತ್ತಿದ್ದುದನ್ನು ಗುರುತಿಸಿದ್ದ. ಆದರೆ ಅದರಲ್ಲಿ ಅಂತಹ ಕುತಂತ್ರವನ್ನು ಗುರುತಿಸಲು ಸಾಧ್ಯವಾಗಲಿಲ್ಲ.

ಶಾಲೆಗೆ ವಾರ್ಷಿಕ ರಜೆ ಶುರುವಾಗಿತ್ತು. ಆವತ್ತು ಜಯನಗರದ ನಾಲ್ಕನೆ ಬ್ಲಾಕಿನ ಕಾಂಪ್ಲೆಕ್ಸಿನೆದುರು ಸಿಮೆಂಟ್ ಬೆಂಚಿನಮೇಲೆ ಕುಳಿತು ಸಂಜೆಯ ಜನಜಂಗುಳಿಯನ್ನು ವೀಕ್ಷಿಸುತ್ತಿದ್ದ. ಫುಟ್‌ಪಾತಿನಲ್ಲಿ, ಬಟ್ಟೆ, ಹಣ್ಣಿನರಸ, ಪಾದರಕ್ಷೆಯಂಗಡಿ ಎಲ್ಲಡೆ ಜನಜಂಗುಳಿ. ಗಂಡಹೆಂಡತಿ ಮಕ್ಕಳುಮರಿ ಪರಿವಾರ ಸಮೇತ ಎಲ್ಲ ತಮ್ಮದೆ ಲೋಕದಲ್ಲಿದ್ದರು. ಇಲ್ಲಿ ತಾನೊಬ್ಬನೆ ಏಕಾಂಗಿ ಅನ್ನುವ ಭಾವ ಆವರಿಸಿಕೊಳ್ಳುವ ಕ್ಷಣಕ್ಕೆ ಪಕ್ಕದಲ್ಲಿ ಯಾರೋ